# 2. ಸಂಜೆಯ ರವಿ

ಸಂಜೆಯ ರಂಜಿಪ ಸೂರ‍್ಯನ ತರುವೆನು
ಕೈ ಬಿಡು ಹೋಗುವೆ ನಾನಮ್ಮ !
ಚಿನ್ನದ ಚೆಂಡನು ಕೈವಶ ಮಾಡುವೆ
ಅಂಜದ ಅನುಮತಿಯೀಯಮ್ಮ ! ॥ 1 ॥

ಬುತ್ತಿಯ ಕೊಡು, ಮೇಣೊಂದೇಣಿಯ ಕೊಡು,
ಬಂಧಿಸಲೀಯೌ ಪಾಶಗಳ !
ಸೇವಕರೇತಕೆ, ಓರ್ವನೆ ಹೋಗುವೆ ;
ತೃಣಕಾರ‍್ಯವ ನಾ ಸಾಧಿಸೆನೆ ? ॥ 2 ॥

ಹೊಲಗಳ ದಾಟುವೆ, ನದಿಗಳನೀಜುವೆ,
ಗಿರಿಗಳನೇರುತ ಹೋಗುವೆನು !
ದಾರಿಯ ಬಂಧಿಪ ಮೃಗಗಳ ಸದೆಯುತ
ಅಸ್ತಮ ಗಿರಿಯನು ಸೇರುವೆನು ! ॥ 3 ॥

ಏಣಿಯ ಮೇಲೇರುತ ನಾ ಸೂರ‍್ಯನ
ಕರಗಳ ಬಂಧಿಸುತೆಳೆತರುವೆ !
ನಮ್ಮನೆಯಲ್ಲಿಯೆ ಆಮೇಲಿರುವನು
ಎನ್ನೊಡನಾಡುತ ನಲಿಯುವನು ॥ 4 ॥

ತಾಯಿಯು ಮಗನಾ ಮುದ್ದಿನ ನುಡಿಗಳ
ಆಲಿಸಿ ಚುಂಬಿಸಿ ಉಸುರಿದಳು –
'ಕಂದಾ, ಎನ್ನಯ ಸೂರ‍್ಯನು ನೀನಿರೆ
ಜಗದಾ ಸೂರ‍್ಯನು ಎನಗೇಕೆ !' ॥ 5 ॥

– ಕುವೆಂಪು

## ಶಬ್ದಗಳ ಅರ್ಥ :

**ರಂಜಿಪ** - ಹೊಳೆಯುವ ; **ಅನುಮತಿ** - ಅಪ್ಪಣೆ ; **ತೃಣಕಾರ್ಯ** - ಚಿಕ್ಕಕೆಲಸ ; **ಸದೆಯುತ** - ಹೊಡೆಯುತ ; **ಅಸ್ತಮಗಿರಿ** - ಪಶ್ಚಿಮಬೆಟ್ಟ

### ಕೃತಿ 1) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

1) ಕವಿಯು ಸಂಜೆಯ ಸೂರ್ಯನನ್ನು ಯಾವುದಕ್ಕೆ ಹೋಲಿಸಿದ್ದಾನೆ ?

2) ಮಗು ತಾಯಿಗೆ ಏನನ್ನು ಕೇಳುತ್ತಾನೆ ?


3) ಮಗುವಿನ ಮುದ್ದು ನುಡಿಗಳನ್ನು ಕೇಳಿ ತಾಯಿ ಏನು ಮಾಡಿದಳು ?

4) ತಾಯಿಯ ದೃಷ್ಟಿಯಲ್ಲಿ ಸೂರ್ಯನು ಯಾರು ?


### ಕೃತಿ 2)

**ಅ)** **ಕೆಳಗಿನ ಪದ ಜಾಲವನ್ನು ಪೂರ್ಣಗೊಳಿಸಿರಿ.**

**ಈ ಪದ್ಯದಲ್ಲಿ ಸೂರ್ಯನಿಗೆ ಬಂದಿರುವ ಎರಡು ಹೆಸರುಗಳು**



**ಬ)**




### ಕೃತಿ 3) ಹೊಂದಿಸಿ ಬರೆಯಿರಿ.

| | |
|---|---|
| 1) ಹೊಲಗಳ ☐ | ಅ) ಏರುವೆ |
| 2) ನದಿಗಳ ☐ | ಬ) ದಾಟುವೆ |
| 3) ಗಿರಿಗಳ ☐ | ಕ) ಸದೆಯುವೆ |
| 4) ಮೃಗಗಳ ☐ | ಡ) ಈಜುವೆ |

**ಉಪಕ್ರಮ :** ಸೂರ್ಯಾಸ್ತದ ಸೊಬಗನ್ನು ನಿಮ್ಮ ಮಾತುಗಳಲ್ಲಿ ಬಣ್ಣಿಸಿರಿ.

CMA2XP